ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority
GST : 29AAALV0060D1ZS


000138

ಸಂಖ್ಯೆ:
No: ಬೆಂಅಪ್ರಾ/ನಯೋಸ/CLU-24/20-21/ 1890 /2022-23 ದಿನಾಂಕ:
Date: 16/11/2022

(Comp No. 144883)

# ಪ್ರಾರಂಭಿಕ ಪ್ರಮಾಣ ಪತ್ರ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ರನ್ವಯ)

**ವಿಷಯ:-** ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

**ಉಲ್ಲೇಖ:-**
1) ಅರ್ಜಿ ದಿನಾಂಕ: 04.08.2020.
2) ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ದಿನಾಂಕ 13.11.2020 ರ ಠರಾವು ಸಂಖ್ಯೆ 70/2020.
3) ಈ ಕಛೇರಿಯ ಪತ್ರ ಸಂಖ್ಯೆ:ಬೆಂಅಪ್ರಾ/ನಯೋಸ/CLU-24/179/2020-21, ದಿನಾಂಕ :13.05.2021.
4) ಸರ್ಕಾರದ ಆದೇಶ ಸಂಖ್ಯೆ: ನಅಇ 133 ಬೆಂಆಸೇ 2021(ಇ), ಬೆಂಗಳೂರು, ದಿನಾಂಕ 25.05.2022.
5) ಈ ಕಛೇರಿಯ ಪತ್ರ ಸಂಖ್ಯೆ:ಬೆಂಅಪ್ರಾ/ನಯೋಸ/CLU-24/20-21/730/2022-23 ದಿನಾಂಕ :01.07.2022.
6) ಅರ್ಜಿದಾರರು ದಿನಾಂಕ 08.07.2022 ರಂದು ಕೆನರಾ ಬ್ಯಾಂಕ್ ನ ಚಲನ್ ಸಂಖ್ಯೆ GN2207830 ರ ಮೂಲಕ ರೂ.2,62,700/- ಗಳನ್ನು ಪ್ರಾಧಿಕಾರಕ್ಕೆ ಸಂದಾಯ ಮಾಡಿದ್ದು, ಇದನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ವಿಭಾಗದವರು ದಿನಾಂಕ 08.08.2022 ರಂದು ಹಣ ಸಂದಾಯವಾದ ಬಗ್ಗೆ ದೃಢೀಕರಿಸಿರುವುದು.

*****

**ಪ್ರಸ್ತಾವನೆ:**

ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡಿಕೊಡುವಂತೆ ಉಲ್ಲೇಖ (1) ರಲ್ಲಿ ಕೋರಿದ್ದ ಪ್ರಸ್ತಾವನೆಯನ್ನು ಉಲ್ಲೇಖ (2) ರಂತೆ ನಡೆದ ಪ್ರಾಧಿಕಾರ ನಗರ ಯೋಜನಾ ಸಮಿತಿ ಸಭೆಯ ತೀರ್ಮಾನದಂತೆ ಉಲ್ಲೇಖ (3) ರ ಈ ಕಛೇರಿಯ ಪತ್ರದ ಮೂಲಕ ಅನುಮೋದನೆ ಕೋರಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿತ್ತು.

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

---

ಪ್ರಾಧಿಕಾರದಿಂದ ಸಲ್ಲಿಸಲಾಗಿದ್ದ ಭೂಉಪಯೋಗ ಬದಲಾವಣೆ ಪ್ರಸ್ತಾವನೆಗೆ ಉಲ್ಲೇಖ (4) ರ ಸರ್ಕಾರದ ಆದೇಶದಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆ ಉಪಯೋಗದಿಂದ ವಸತಿ ಉಪಯೋಗಕ್ಕೆ ಕೆಲವೊಂದು ಷರತ್ತುಗಳಿಗೊಳಪಟ್ಟು ಭೂಉಪಯೋಗ ಬದಲಾವಣೆ ನೀಡಲು ಸರ್ಕಾರದ ಅನುಮತಿ ನೀಡಲಾಗಿದೆ.

ಪ್ರಶ್ನಿತ ಜಮೀನಿನ ಭೂಉಪಯೋಗ ಬದಲಾವಣೆ ಮಾಡುವ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 18 ರಡಿಯಲ್ಲಿ ಉತ್ತಮತೆ ಶುಲ್ಕ, ಪರಿಶೀಲನಾ ಶುಲ್ಕ ಮತ್ತು ಜಿಎಸ್ ಟಿ ಸೇರಿ ಒಟ್ಟು ಮೊತ್ತ ರೂ.2,62,700/- ಗಳನ್ನು ಸಂದಾಯ ಮಾಡುವಂತೆ ಅರ್ಜಿದಾರರಿಗೆ ಉಲ್ಲೇಖ (5) ರ ಪತ್ರದಲ್ಲಿ ತಿಳಿಸಲಾಗಿತ್ತು. ಅದರಂತೆ ಅರ್ಜಿದಾರರು ದಿನಾಂಕ 08.07.2022 ರಂದು ರೂ.2,62,700/- ಗಳನ್ನು ಪ್ರಾಧಿಕಾರಕ್ಕೆ ಜಮಾ ಮಾಡಿದ್ದು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯರ ವಿಭಾಗದವರು ದಿನಾಂಕ 08.08.2022 ರಂದು ಹಣ ಸಂದಾಯವಾಗಿರುವ ಬಗ್ಗೆ ದೃಢೀಕರಿಸಿ ವರದಿ ನೀಡಿರುತ್ತಾರೆ.

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A ರ ಅಡಿಯಲ್ಲಿನ ಅವಕಾಶದನ್ವಯ "ಕೈಗಾರಿಕೆ" ವಲಯದಿಂದ "ವಸತಿ" ವಲಯಕ್ಕೆ ಭೂಉಪಯೋಗ ಬದಲಾವಣೆ ಬಗ್ಗೆ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಆದೇಶ:

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14-A ಅಡಿಯಲ್ಲಿನ ಅವಕಾಶದನ್ವಯ **ಕೈಗಾರಿಕ** ವಲಯದಿಂದ **ವಸತಿ** ಉಪಯೋಗಕ್ಕೆ ಭೂಉಪಯೋಗ ಬದಲಾವಣೆಯನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಅನುಮೋದನೆ ನೀಡಲಾಗಿದೆ.

## ಷರತ್ತುಗಳು

1. ಅರ್ಜಿದಾರರು ಪ್ರಸ್ತಾವಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮುನ್ನ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 15 or 17 ರಡಿಯಲ್ಲಿ ವಲಯ ನಿಯಮಾವಳಿಗಳನ್ವಯ ವಿನ್ಯಾಸ/ ಅಭಿವೃದ್ಧಿ/ಕಟ್ಟಡ ನಕ್ಷೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಕಡ್ಡಾಯವಾಗಿ ಅನುಮೋದನೆ ಪಡೆಯತಕ್ಕದ್ದು.

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆಯಿಂದ ವಸತಿ ಉಪಯೋಗಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

---

2. ಭೂಉಪಯೋಗ ಬದಲಾವಣೆಯು ಆಸ್ತಿಯ ಸ್ವತ್ತಿನ ಪ್ರತಿಪಾದನೆಗೆ ದಾಖಲೆಯೆಂದು ಸಲ್ಲಿಸುವುದಿಲ್ಲವೆಂದು, ಭೂಪಯೋಗ ಬದಲಾವಣೆ ಕುರಿತಂತೆ ಯಾವುದೇ ನ್ಯಾಯಾಲಯದ / ವಿಚಾರಣಾ ಪ್ರಾಧಿಕಾರದ ಅಂತಿಮ ಆದೇಶಕ್ಕೆ ಬದ್ಧರಿರುವುದಾಗಿ ಮತ್ತು ಭೂಉಪಯೋಗ ಬದಲಾವಣೆ ಸಂಬಂಧ ಪಾವತಿಸಲಾದ ಶುಲ್ಕಗಳನ್ನು ವಾಪಸ್ಸು ಕೇಳುವುದಿಲ್ಲವೆಂದು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಬದ್ಧರಾಗಿರತಕ್ಕದ್ದು.
3. ಪ್ರಸ್ತಾವಿತ ಜಮೀನುಗಳನ್ನು ಯಾವ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲಾಗಿದೆಯೋ ಅದೇ ಉದ್ದೇಶಕ್ಕಾಗಿ ಮಾತ್ರ ಜಾಗವನ್ನು ಉಪಯೋಗಿಸತಕ್ಕದ್ದು.
4. ಪ್ರಸ್ತಾವಿತ ಜಮೀನುಗಳನ್ನು ಅಭಿವೃದ್ಧಿ ಪಡಿಸುವ ಸಮಯದಲ್ಲಿ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಆದೇಶ ಪಡೆದು ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸತಕ್ಕದ್ದು.
5. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಅಥವಾ ಯಾವುದೇ ಸಕ್ಷಮ ಪ್ರಾಧಿಕಾರಗಳು ಪ್ರಸ್ತಾಪಿಸಿರುವ ರಸ್ತೆಗಳು, ಪ್ರಶ್ನಿತ ಜಮೀನುಗಳ ಮೇಲೆ ಹಾದು ಹೋದಲ್ಲಿ, ರಸ್ತೆಗಾಗಿ ಜಾಗವನ್ನು ಪುಕ್ಕಟೆಯಾಗಿ ಬಿಟ್ಟುಕೊಡುವ ಷರತ್ತಿಗೆ ಒಳಪಟ್ಟಿರುತ್ತದೆ.
6. ಪ್ರಸ್ತಾವಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮುನ್ನ ಅಗತ್ಯವಿರುವ ಇಲಾಖೆಗಳಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯತಕ್ಕದ್ದು.
7. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರಾಕ್ಷೇಪಣಾ ಪತ್ರ ಪಡೆಯುವುದು ಹಾಗೂ ಅದರಲ್ಲಿನ ಷರತ್ತುಗಳನ್ನು ಪಾಲಿಸತಕ್ಕದ್ದು ಹಾಗೂ "ಮಳೆ ನೀರು ಕೊಯ್ಲು" ವ್ಯವಸ್ಥೆಯನ್ನು ಕಡ್ಡಾಯವಾಗಿ ಅಳವಡಿಸತಕ್ಕದ್ದು.
8. ಪ್ರಶ್ನಿತ ಜಮೀನುಗಳಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಪ್ರಶ್ನಿತ ಜಮೀನುಗಳ ಉಪಗಮನ ರಸ್ತೆಗೆ ಸೂಕ್ತ ಮಾರ್ಜಿನ್ ಅನ್ನು ಅಳವಡಿಸಿಕೊಳ್ಳತಕ್ಕದ್ದು ಹಾಗೂ ಮೂಲಭೂತ ಅಭಿವೃದ್ಧಿ ವೆಚ್ಚವನ್ನು ಅರ್ಜಿದಾರರೇ ಭರಿಸತಕ್ಕದ್ದು.
9. ಕೆರೆ, ನಾಲಾ ಹಳ್ಳಗಳಿಗೆ ಹೊಂದಿಕೊಂಡಂತೆ ಬರುವ ಪ್ರದೇಶದಲ್ಲಿ ವಲಯ ನಿಯಮಾನುಸಾರ ಬಫರ್ ಗಾಗಿ ಜಾಗವನ್ನು ಮೀಸಲಿಟ್ಟು ಯಥಾವತ್ತಾಗಿ ವಿನ್ಯಾಸ ನಕ್ಷೆಯಲ್ಲಿ ಅಳವಡಿಸಿ ಅಭಿವೃದ್ಧಿಪಡಿಸುವ ಷರತ್ತಿಗೊಳಪಟ್ಟಿರುತ್ತದೆ.
10. ಪ್ರಸ್ತಾವಿತ ಜಮೀನುಗಳ ಬಗ್ಗೆ ಯಾವುದೇ ಸಿವಿಲ್ ವ್ಯಾಜ್ಯ ತಂಟೆ ತಕರಾರುಗಳಿದ್ದಲ್ಲಿ, ಪ್ರಾಧಿಕಾರಕ್ಕೆ ಯಾವುದೇ ಜವಾಬ್ದಾರಿ ಇರುವುದಿಲ್ಲ ಮತ್ತು ನ್ಯಾಯಾಲಯಗಳು ನೀಡುವ ಆದೇಶಕ್ಕೆ ಅರ್ಜಿದಾರರೇ ಬದ್ಧರಾಗಿರತಕ್ಕದ್ದು.

ವಿಷಯ:- ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣದ ಪ್ರದೇಶವನ್ನು ಕೈಗಾರಿಕೆಯಿಂದ ವಸತಿ ಉಪಯೋಗಕ್ಕೆ ಕೆಟಿಸಿಪಿ ಕಾಯ್ದೆಯ 1961 ರ ಕಲಂ 14-A ರಡಿಯಲ್ಲಿ ಭೂಉಪಯೋಗ ಬದಲಾವಣೆ ಮಾಡುವ ಬಗ್ಗೆ.

---

11. ಪ್ರಸ್ತಾವಿತ ಜಮೀನಿನ ಸಂಬಂಧವಾಗಿ ತಪ್ಪು ಮಾಹಿತಿ /ದಾಖಲಾತಿಗಳನ್ನು ನೀಡಿದ್ದಲ್ಲಿ ಅರ್ಜಿದಾರರೇ ನೇರ ಹೊಣೆಗಾರರಾಗುವುದಲ್ಲದೇ ಕೆಟಿಸಿಪಿ ಕಾಯ್ದೆ ಕಲಂ 76 (O) ರನ್ವಯ ಭೂ ಉಪಯೋಗದ ಆದೇಶ ರದ್ದಾಗುತ್ತದೆಂದು ತಿಳಿಯತಕ್ಕದ್ದು.
12. ಸರ್ಕಾರದ ಆದೇಶ ಸಂಖ್ಯೆ: ನಅಇ 133 ಬೆಂಆಸೇ 2021(ಇ), ಬೆಂಗಳೂರು, ದಿನಾಂಕ 25.05.2022 ರಲ್ಲಿ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.
13. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ / ಸಕ್ಷಮ ಪ್ರಾಧಿಕಾರ ವಿಧಿಸುವ ಇನ್ನಿತರೆ ನಿಬಂಧನೆಗಳನ್ನು ಪಾಲಿಸತಕ್ಕದ್ದು.

ಮೇಲ್ಕಂಡ ಷರತ್ತುಗಳೊಂದಿಗೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ಪೀಣ್ಯ ಗ್ರಾಮದ ಸರ್ವೆ ನಂ. 72/2 ಮತ್ತು 72/4 ರಲ್ಲಿನ (PID No. 11-82-39) ಒಟ್ಟು 2748.37 ಚ.ಮೀ ವಿಸ್ತೀರ್ಣ ಪ್ರದೇಶವನ್ನು ಭೂಉಪಯೋಗ ಬದಲಾವಣೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14-A ಅಡಿಯಲ್ಲಿ ಅನುಮತಿ ನೀಡಲಾಗಿದೆ.

ಆಯುಕ್ತರು
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಬೆಂಗಳೂರು.

**ಇವರಿಗೆ,**

ಶ್ರೀ ಟಿ. ಧನಂಜಯ
ಮೆ||ಮೇಘಾ ಬಿಲ್ಡರ್ಸ್, ನಂ. 28, ಸರ್ವೆ ನಂ. 29,
ಉತ್ತರ ಹಳ್ಳಿ ಗ್ರಾಮ, ಉತ್ತರಹಳ್ಳಿ ಹೋಬಳಿ,
ಬೆಂಗಳೂರು-560 061.

Recipient Copy

# BANGALORE DEVELOPMENT AUTHORITY

T.Chowdaiah Road, Kumarapark West, Banglaore-560020
GSTIN:29AAALB0060D1ZS
PAN NO : AAALB0060D
State Name : Karnataka, Code : 29

000129

## REMITTANCE CHALLAN

No. : GN2207830

Date : 8-Jul-22

Through : 2828201002001

| Particulars | Amount |
|---|---|
| **Account :** | |
| 11185 Betterment charges | 2,19,870.00 |
| 16188 Other allottee / Contractor receipts | 2,749.00 |
| 331530 CGST | 20,036.00 |
| 331531 SGST | 20,036.00 |
| 16188 Other allottee / Contractor receipts | 9.00 |

ಸದರಿ ಚಲನ್ ಮೊತ್ತ ರೂ.......
ಪ್ರಾಧಿಕಾರದ ಖಾತೆ ಸಂ.......
ದಿನಾಂಕ 11/7/22 ರಂದು ಜಮ ಆಗಿರುವುದನ್ನು
ಬ್ಯಾಂಕ್‌ನ ಪಾಸ್‌ಶೀಟ್‌ನೊಂದಿಗೆ ತಾಳೆ ನೋಡಿ ದೃಢೀಕರಿಸಿದೆ.

ಲೆ.ಅ. ಲೆ.ಪ.ಅ.

**Bank Transaction Details:**

11185 Betterment charges,Federal Bank (India)

Electronic DD/PO 362168 8-Jul-22 2,62,700.00

Amount (in words) :

INR Two Lakh Sixty Two Thousand Seven Hundred Only

₹ 2,62,700.00

Name : T DHANANJAYA
Site No / Flat No : SYNO 72/2 AND 72/4 PEENYA GRAMA
Layout / Flat No :YESHWANTHAPUR HOBLI PID NO 11-82-39

*GN2207830*

केनरा बैंक
CANARA BANK
8 JUL 2022
बी.डी.ए.कंप्लेक्स शाखा, बेंगलूरु-560 020
B.D.A. COMPLEX BR., BENGALURU-560 020

Bank Seal & Signatory

NOTE : MERE ACCEPTANCE OF THE REMITTANCE BY THE BANK DOES NOT AUTOMATICALLY CONFER ON THE PAYER'S BENEFITS EXPECTED FROM SUCH PAYMENTS. THE PAYER IS EXPECTED TO ENSURE COMPLIANCE WITH THE VARIOUS REQUIREMENTS OF BDA BEFORE NECESSARY BENEFITS ACCRUE TO HIM / HER.

**(RECEIPTS ISSUED AGAINST PAY ORDERS / DRAFTS SUBJECT TO REALISATION)**